ನೋಟಿಸ್.

ಕೋಲಾರ ಡಿಸ್ಟ್ರಿಕ್ಟಿನಲ್ಲಿ 1907—08ನೆ ಸಾಲಿನಲ್ಲಿ ದೊರಿಯಬಹುದಾದ ಪಸಾರೆ ಜಿನಸುಗಳು ಕೊಂಡುಕೊಳ್ಳುವ ವಿಷಯದಲ್ಲಿ ಅಕ್ಟೋಬರ್ ತಾರೀಖು 10ನೆ ಮಕ್ಕುಂನ ಮೈಸೂರು ಗೆಜೆಟ್ IIನೆ ಭಾಗದ 492ನೆ ಪೇಜಿನಲ್ಲಿ ಛಾಯಿಷ್ ಆಗಿರುವ 1907ನೆ ಸೆಪಟಂಬರ್ ತಾರೀಖು 30ನೆ ಮಕ್ಕುಂನ ನೋಟಿಫಿಕೇಷ್ಣಗೆ ಸಮಸ್ತ ಜನಗಳು ಗಮನ ಕೊಡಬೇಕು.

ಎಸ್ ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ, ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ ಹೋಬಳಿ ಕಾಯಂಗುತ್ತ ಚೀಗಾನಹಳ್ಳಿ ಗ್ರಾಮವು 1907ನೆ ಇಸವಿ ನವಂಬರ್ 7ನೆ ತಾರೀಖಿನಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ.—ಹೆಚ್ಚಿನ ತಪ್ಸೀಲಿಗೆ 1907ನೆ ಇಸವಿ ಅಕ್ಟೋಬರ್ ತಾರೀಖು 10ನೆ ಮಕ್ಕುಂನ ಮೈಸೂರು ಗೆಜೆಟ್ IIನೆ ಭಾಗದ 497ನೆ ಪುಟದಲ್ಲಿ ಛಾಯಿಷಾಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಬಿ. ವೆಂಕೋಬರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 3—5ನೆ ಅಕ್ಟೋಬರ್ 1907.

1906ನೆ ಇಸವಿ ನವಂಬರ್ 8ನೆ ನಂಕ್ರಂ F. L. 3304-6—S. R. 146-05-7ನೆ ಗೌರ್ನಮೆಂಟ್ ಆರ್ಡರು ಅನುಸರಿಸಿ ಈ ಮೂಲಕ ತಿಳಿಯಪಡಿಸುವದೇನಂದರೆ,—

ಡಿಸ್ಟ್ರಿಕ್ಟು ಮಜಕೂರು ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿ ಹಳ್ಳ ತಹಲ್ ವರಿಗೂ ಗೌರ್ನಮೆಂಟಿನಿಂದ ಸ್ಥಿರಪಡಿಸಲ್ಪಡದೆ ಇರುವ ಶ್ರೀ ಪರಕಾಳಿಸ್ವಾಮಿಗಳವರ ಮಠ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಗಳಿಗೆ ಕೇರಿದ ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿಗೆ ಮಠದ ಹಕ್ಕನ್ನು ಸ್ಥಿರಪಡಿಸುವ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟು ಎಕ್ಸ್ಟ್ರಾಜು ಆಫಿಸರವರು 1—11—1907ನೆ ತಾರೀಖಿನ ದಿವಸ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರೆ.

ಸದರಿ ಮಠಗಳ ವಿಜಂಟರುಗಳು ಮೇಲ್ಕಂಡ ಆಫಿಸರ ಬಳಿ ಸದರಿ ತಾರೀಖುನಲ್ಲಿ ತಮ್ಮಲ್ಲಿ ಇರತಕ್ಕ ಸನ್ನದು, ಇನಾಂ ಟೈಟಲ್ ಡೀಡು, ಮುಚ್ಚಳಿಕೆ ವಗೈರೆ ಸಕಲ ದಾಖಲಾತಿಗಳನ್ನು ಹಾಜರ್ಪಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲಾಗಲಾರದೆಂದು ಪ್ರಸಿದ್ಧಪಡಿಸಿದೆ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್‌ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಹಿಟ್ಟು ಹೆಬ್ಬಾಗಿಲು ಗ್ರಾಮ ದಿಡ್ಡಿ ನರಸಿಂಹ ಉಪಾಧ್ಯರು ವಗೈರೆರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಕಛೇರಿಯಲ್ಲಿ 1907ನೆ ಡಿಸೆಂಬರ್ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು ವಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಛಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906-07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ವೇರಿಗೆ ರೂಪಾಯಿ 435—1—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.